Date : 5-9-2015

# ಕೇರಳದಲ್ಲಿ ಹಣದ ಅಡಚಣೆಯಿಂದ ಸ್ಥಗಿತಗೊಂಡಿದ್ದ 30 ಸಾರ್ವಜನಿಕ ರಂಗದ ಗೋಡಂಬಿ ಕಾರ್ಖಾನೆಗಳ ಪುನರಾರಂಭ

ಕಾರ್ಯಾಚರಣೆ ಭಂಡವಾಳದ ಅಭಾವದಿಂದ ಕೇರಳ ರಾಜ್ಯ ಗೋಡಂಬಿ ಅಭಿವೃದ್ಧಿ ಕಾರ್ಪೋರೇಶನ್ (ಕೆಎಸ್‌ಟಿಡಿಸಿ) ಯ 30 ಗೋಡಂಬಿ ಕಾರ್ಖಾನೆಗಳು ಕೆಲವು ತಿಂಗಳುಗಳ ವರೆಗೆ ಸ್ಥಗಿತಗೊಂಡಿದ್ದವು. 30 ಕೋಟಿ ರೂ. ಬಿಡುಗಡೆ ಮಾಡುವ ಕ್ಯಾಬಿನೆಟ್‌ನ ತೀರ್ಮಾನದಿಂದ ಸ್ಥಗಿತಗೊಂಡಿದ್ದ ಎಲ್ಲಾ ಕಾರ್ಖಾನೆಗಳು ಓಣಂ ಹಬ್ಬಕ್ಕಿಂತ ಮೊದಲೇ ಕಾರ್ಯಾರಂಭ ಮಾಡಿವೆ. ಆದರೆ ಹದಿನೈದು ಕೋಟಿ ರೂಪಾಯಿ ಹಣ ಕಾರ್ಮಿಕರಿಗೆ ಬೋನಸ್, ರಜಾ ಅವಧಿ ಕೂಲಿ ಹಾಗೂ ಕೂಲಿ ಸಹಿತ ರಜೆಗಳಿಗಾಗಿ ವಿನಿಯೋಗವಾಗಿದೆಯೆನ್ನಲಾಗಿದೆ. ಇನ್ನುಳಿದ ಹಣ 2000 ಟನ್ ಕಚ್ಚಾ ಗೇರು ಬೀಜ ಖರೀದಿಗೆ ವಿನಿಯೋಗವಾಗಿದೆ. ಈಗಿರುವ ಕಚ್ಚಾ ಗೋಡಂಬಿ ಸೆಪ್ಟೆಂಬರ್ 10ರ ತನಕ ಸಾಕಾಗಬಹುದೆನ್ನಲಾಗಿದೆ. ಇದರಿಂದ ಸಂಸ್ಕರಣೆ ಕೆಲಸ ಸೇರಿ ಸೆಪ್ಟೆಂಬರ್ 23ರ ತನಕ ಕಾರ್ಖಾನೆಗಳು ಕಾರ್ಯಾಚರಿಸಲು ಸಾಧ್ಯವೆಂದು ಕೆ.ಎಸ್.ಟಿ.ಡಿ.ಸಿಯ ಡೈರೆಕ್ಟರ್ ರಾಜೇಶ್ ಹೇಳಿದ್ದಾರೆನ್ನಲಾಗಿದೆ.

ಈ ವರೆಗೆ ಮಾರಾಟವಾಗದೆ ಉಳಿದಿದ್ದ ಗೋಡಂಬಿ ತಿರುಳನ್ನು ಮಾರಾಟಮಾಡಿ ಕಚ್ಚಾ ಗೋಡಂಬಿ ಖರೀದಿಸಲು ಕ್ರಮಕೈಗೊಳ್ಳುವುದಾಗಿ ಅವರು ತಿಳಿಸಿದ್ದಾರೆನ್ನಲಾಗಿದೆ. ಕಾರ್ಖಾನೆಗಳು ಮುಚ್ಚು ಗಡೆಯಾಗಿದ್ದುದರಿಂದ ಕಚ್ಚಾ ಗೋಡಂಬಿ ಖರೀದಿಸಲು ಸಾಕಷ್ಟು ದಾಸ್ತಾನಿರಿಸಲು ಅನಾನುಕೂಲವಾಗಿತ್ತೆನ್ನಲಾಗಿದೆ. ಕಚ್ಚಾ ಗೋಡಂಬಿ ಖರೀದಿಸಲು ಶಕ್ತವಾದರೆ ಮಾತ್ರ ಸೆಪ್ಟೆಂಬರ್ 23ರ ನಂತರ ಕಾರ್ಖಾನೆಗಳು ಕಾರ್ಯಾಚರಿಸಲು ಶಕ್ತವಾಗಬಹುದೆನ್ನಲಾಗಿದೆ.